(ಮಾನ್ಯ ಸದಸ್ಯರುಗಳು ರೈತ ವಿರೋಧ ಸರ್ಕಾರಕ್ಕೆ ಧಿಕ್ಕಾರ ಎಂದು ಕೂಗುತ್ತಾ ಸದನದಿಂದ ಹೊರನಡೆದರು)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ವಿಷಯವನ್ನು ಪ್ರಸ್ತಾಪ ಮಾಡಿ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ :

ವಿಷಯ: ಶ್ರೀ ಜಮೀರ್ ಅಹಮದ್ ಖಾನ್‌ರವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವಾಗ, ಕನ್ನಡದಲ್ಲಿ ಸ್ವೀಕರಿಸಿಲ್ಲ, ಜೊತೆಗೆ 'ಸತ್ಯ' ಹಾಗೂ 'ಭಗವಂತನ! ಹೆಸರಿನಲ್ಲಿ ಎನ್ನದೆ ಶ್ರೀ ಕುಮಾರ್ ಸ್ವಾಮಿಯವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಈ ರಾಜ್ಯದ ಮಂತ್ರಿಮಂಡಲ ವಿಸ್ತರಣೆಯಾಯಿತು. ಅದರಲ್ಲಿ ಕೆಲವು ಸಚಿವರು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದಾಗ, ಅದರಲ್ಲಿ ಮಾನ್ಯ ಜಮೀರ್ ಅಹಮದ್ ಖಾನ್‌ರವರು ನನ್ನ ಸ್ನೇಹಿತರು, ಇವರ ಬಗ್ಗೆ ನನಗೆ ವೈಯಕ್ತಿಕವಾಗಿ ಯಾವುದೇ ಭಾವನೆ ಇಲ್ಲ. ಇವರು ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದು, ಕನ್ನಡ ಭಾಷೆಯಲ್ಲಿ ಅಲ್ಲ. ನಮ್ಮ ರಾಜ್ಯದ ಭಾಷೆಯಲ್ಲಿ ಅಲ್ಲ, ಇವರು ನಮ್ಮ ರಾಜ್ಯದ ಮಂತ್ರಿಗಳಾಗಿ ಪ್ರಮಾಣ ವಚನವನ್ನು ಸ್ವೀಕಾರವನ್ನು ಮಾಡಿರುವುದು. ಇವರು ದೆಹಲಿಯ ಅಥವಾ ರಾಷ್ಟ್ರದ ಬೇರೆ ಯಾವುದೋ ಒಂದು ರಾಜ್ಯದ, ಅಥವಾ ಬೇರೆ ಕಡೆಯಲ್ಲಿ ಮಂತ್ರಿಯಾಗಿ ಇರಲಿಲ್ಲ. ಅವರು ಮಾತನಾಡುವಾಗ ಇಂಗ್ಲೀಷ್‌ನಲ್ಲಿ ಪ್ರಮಾಣ ವಚನವನ್ನು ಪಡೆದರು. ಇದು ನನಗೆ ಬಹಳ ಅತ್ಯಂತ, ನೋವು ಆಯಿತು. ಇದು ಈ ರಾಜ್ಯಕ್ಕೆ ಮಾಡಿರುವಂತಹ ಅತ್ಯಂತ ಅಪಮಾನ, ಮತ್ತು ಅಗೌರವ ಆಗಿದೆ. ಇವರು ಪ್ರಮಾಣ ವಚನ ತೆಗೆದುಕೊಂಡ ದಿಕ್ಕು ಸರಿಯಾಗಿ ಇಲ್ಲ. ಇಲ್ಲಿ ಒಂದು ಸತ್ಯದ ಹೆಸರಿನಲ್ಲಿ, ಇನ್ನೊಂದು ಭಗವಂತನ ಹೆಸರಲ್ಲಿ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಶ್ರೀ ಕುಮಾರಸ್ವಾಮಿಯವರ ಹೆಸರಿನಲ್ಲಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು. ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ಎಲ್ಲೂ ಕುಮಾರಣ್ಣ ಇರಬಹುದು, ದೇವರಣ್ಣ ಇರಬಹುದು, ಯಾವ ಅಣ್ಣಗಳು ಬರುವುದಿಲ್ಲ. ಅಲ್ಲಿ ಸತ್ಯ ಮತ್ತು ದೇವರು ಎರಡು ಇರುವಂಥಾದ್ದು, ಅದನ್ನು ತಾವು ನೋಡಿದರೂ ಇಲ್ಲವೋ ಗೊತ್ತಿಲ್ಲ. ಇಲ್ಲಿ ರಾಜ್ಯಪಾಲರು ಯಾವ ರೀತಿಯಲ್ಲಿ ನೋಡಿದರೋ ಗೊತ್ತಿಲ್ಲ. ಇವರು ನಿಜವಾಗಿಯೂ ಪ್ರಮಾಣ ವಚನವನ್ನು ತೆಗೆದುಕೊಂಡಿಲ್ಲ. ಇದನ್ನು ನಾವು ಪ್ರಮಾಣವಚನವೆಂದು

ಹೇಳುವುದಿಲ್ಲ. ಆದುದರಿಂದ ತಾವು ಸದಸ್ಯರು ಆಗಿದ್ದೀರಿ, ಅದರ ಬಗ್ಗೆ ನನ್ನದು ಏನು ತಕರಾರು ಇಲ್ಲ. ತಾವು ಸಚಿವರಾಗಿ ಮಾತ್ರ ಇಲ್ಲ, ಅದು ಸ್ಪಷ್ಟ. ಇದನ್ನು ಪ್ರಮಾಣ ವಚನವನ್ನು ತೆಗೆದುಕೊಂಡ ದೃಷ್ಟಿಯಲ್ಲಿ ನೋಡಿದಾಗ, ಆದರೆ ಭಾಷೆಯ ದೃಷ್ಟಿಯಲ್ಲಿ ತೆಗೆದುಕೊಂಡಾಗ, ನೀವು ಈ ರಾಜ್ಯಕ್ಕೆ ಬಹಳ ಅಪರಾಧವನ್ನು ಮಾಡಿದ್ದೀರಿ. ಈ ರಾಜ್ಯದ ಸಚಿವರಾಗಿ ಪ್ರಮಾಣ ವಚನ ತೆಗೆದುಕೊಳ್ಳುವಾಗ ತಾವು ಈ ರಾಜ್ಯದ ಜನತೆಯ ಮತವನ್ನು ತೆಗೆದುಕೊಂಡು, ನೀವು ಈ ರಾಜ್ಯದ ಸಚಿವ ಸಂಪುಟದ ಸಚಿವರಾಗಿ ಬಂದಿರುವಾಗ, ನೀವು ಈ ರಾಜ್ಯದ ಬಗ್ಗೆ ತಾವು ತೆಗೆದುಕೊಂಡ ನಿರ್ಧಾರಗಳು, ತಾವು ತೆಗೆದು ಕೊಂಡಂಥಾದ್ದನ್ನು ನೋಡಿ, ನನಗೆ ಅತ್ಯಂತ ನೋವು, ವೇದನೆಯಾಯಿತು. ನಾನು ಯಾರನ್ನು ಕೇಳುವುದಿಲ್ಲ, ಇದು ಅವರವರಿಗೆ ಸೇರಿದ್ದು. ಕೆಲವರು ಕಾಲಿಗೆ ಬೀಳುತ್ತಿದ್ದರು, ಇದು ದೊಡ್ಡ ಗುಲಾಮಗಿರಿ ಸಂಕೇತ, ಆ ಕಡೆ ಮುಖ್ಯಮಂತ್ರಿಯವರ ಕಾಲಿಗೆ, ಈ ಕಡೆ ಉಪ ಮುಖ್ಯಮಂತ್ರಿಯವರ ಕಾಲಿಗೆ, ಈ ಕಡೆ ಉಪ ಮುಖ್ಯಮಂತ್ರಿಯವರ ಕಾಲಿಗೆ ಬೀಳುತ್ತಿದ್ದರು. ಇವರು ದಬದಬ ಇವರ ಕಾಲಿಗೆ ಬೀಳುತ್ತಿದ್ದರು. ಇವರು ಮಂತ್ರಿಗಳಾಗಿದ್ದಾರಾ ಏನು ಆಗಿದ್ದಾರೆ? ಇವರಿಗೆ ಸ್ವಾಭಿಮಾನ, ಸ್ವಲ್ಪ ಗೌರವ, ಮಾನ, ಮರ್ಯಾದೆ, ಇರಬೇಕಲ್ಲಾ? ಇದನ್ನು ನೋಡಿ ನನಗೆ ಎಷ್ಟು ನೋವು ಆಯಿತೆಂದರೆ, ಅತ್ಯಂತ ನೋವು ಆಯಿತು; ಇದು ಈ ಸದನಕ್ಕೆ ಈ ರಾಜ್ಯಕ್ಕೆ ಪ್ರಜಾತಂತ್ರ ವ್ಯವಸ್ಥೆಗೆ ಅಪಚಾರವನ್ನು ಎಸಗಿದ್ದೀರಿ. ಇದು ನನಗೆ ಬಹಳ ನೋವು ಆಗಿದೆ. ಇನ್ನೂ ಅನೇಕ ವಿಚಾರಗಳು ಇವೆ, ಅದನ್ನು ಹೇಳುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅವರಲ್ಲಿ ಗೊಂದಲ ಸೃಷ್ಟಿಯಾಗಿದೆ. ಮಾನ್ಯ ಮಹಿಮಾ ಪಟೇಲ್‌ರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ, ಮಹಿಳೆಯರು ವಿರೋಧವಾಗಿದ್ದಾರೆ. ಪಕ್ಷದಲ್ಲಿ ಒಡಕು ಶುರುವಾಗಿದೆ. ಇದು ಏನು ಆಗುತ್ತದೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಅದನ್ನು ಜಾಸ್ತಿ ಲಂಬಿಸುವುದಕ್ಕೆ ಹೋಗುವುದಿಲ್ಲ. ನಾನು ಇಷ್ಟು ಮಾತ್ರ ತಮಗೆ ಹೇಳುತ್ತೇನೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿ, ಭಾಷಣವನ್ನು ಮಾಡುತ್ತಿದ್ದೀರಲ್ಲಾ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಅವರು ರಾಜೀನಾಮೆಯನ್ನು ಕೊಡಲೇ ಬೇಕು. ನಾನು ಅವರನ್ನು ಮಂತ್ರಿ ಎಂದು ಕರೆಯುವುದಿಲ್ಲ. ಅವರು ಮಂತ್ರಿಯಾಗುವುದಕ್ಕೆ ಸರಿ ಇಲ್ಲ. ಆ ದೃಷ್ಟಿಯಿಂದ

ಅವರು ಸ್ಪಷ್ಟವಾಗಿ ಜೈ ಹಿಂದ್, ಜೈ ಕರ್ನಾಟಕ ಎಂದು ಇದರಲ್ಲಿ ಬರುವುದಿಲ್ಲ. ಇಲ್ಲಿ ಸತ್ಯದ ಹೆಸರಿನಲ್ಲಿ ಮತ್ತು ಭಗವಂತನ ಹೆಸರಿನಲ್ಲಿ ಬರುತ್ತದೆ. ಅದನ್ನು ಬಿಟ್ಟು ಯಾರ ಹೆಸರಿನಲ್ಲೂ ಬರುವಂತಹ ಪ್ರಶ್ನೆ ಬರುವುದೇ ಇಲ್ಲ. ಅದು ಅಕ್ಷಮ್ಯ ಅಪರಾಧವನ್ನು ಇವರು ಮಾಡಿದ್ದಾರೆಂದು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಹಿಂದೆ ಕೂಡ ಈ ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೆವು. ಇಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ಮಂತ್ರಿಗಳು ಆಗುತ್ತಾರೆ. ಸಂವಿಧಾನದಲ್ಲಿ ಏನು ಪ್ರಮಾಣ ವಚನವನ್ನು ಸ್ವೀಕಾರ ಮಾಡುವುದಕ್ಕೆ ಸ್ಕೋಪ್ ಇದೆ. ಆ ಸ್ಕೋಪ್ ಅನ್ನು ಬಿಟ್ಟು ಆಚೆಗೆ ಹೇಳಬಾರದು. ನಮಗೆಲ್ಲಾ ಇದು ನೋವು ಆಗುತ್ತದೆ. ನೀವು ಯಾರ ಮೇಲಾದರೂ ಪ್ರೀತಿ ಇಟ್ಟುಕೊಂಡಿರಿ, ವಿಶ್ವಾಸ ಇಟ್ಟುಕೊಂಡಿರಿ, ಆ ಭಾವನೆಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇರಬೇಕಾಗುತ್ತದೆ. ಇಲ್ಲಿ ರಾಜ್ಯಪಾಲರನ್ನು ಕರೆದು ಸಂವಿಧಾನಾತ್ಮಕವಾಗಿ ಒಂದು ವಿಧಿಯನ್ನು ಭೋದನೆ ಮಾಡಬೇಕಾದರೆ, ಅಲ್ಲಿ ತಮಗೆ ಅಪ್ಸನ್ ಕೊಟ್ಟಿರುತ್ತಾರಾ? ಇದನ್ನು ಹೇಳಬಹುದು ಇಲ್ಲ ಅದು ಹೇಳಬಹುದು ಎಂದು. ಅದನ್ನು ಬಿಟ್ಟು ಆಚೆಗೆ ಮಾಡುವಂಥಾದ್ದು, ಸಂವಿಧಾನಕ್ಕೆ ಅಪಚಾರ ಮಾಡಿದಂತೆ ಆಗುತ್ತದೆ. ಇಲ್ಲಿ ಸಂವಿಧಾನಕ್ಕೆ ಅಪಚಾರವನ್ನು ಮಾಡಿ, ನಾವು ಮಂತ್ರಿಗಳಾಗಿ ಇಲ್ಲಿ ಇರಬೇಕಾ ಎಂಬುದನ್ನು ನೀವೇ ಯೋಚನೆ ಮಾಡಬೇಕಾಗುತ್ತದೆ. ಸಂವಿಧಾನದಲ್ಲಿ ನಾನು ಮಂತ್ರಿಯಾಗಬೇಕಾದರೆ ಏನು ಪ್ರಮಾಣ ವಚನ ಮಾಡಬೇಕು, ನಾನು ಗೌಪ್ಯತೆಯನ್ನು ಸ್ವೀಕಾರ ಮಾಡಬೇಕೆಂದು ಸ್ಪಷ್ಟವಾಗಿರುವುದನ್ನು ಬರೆದು ಕೊಟ್ಟಿರುವುದನ್ನು ಬಿಟ್ಟು ನೀವು ಹೇಳುವುದಾದರೆ, ಇಲ್ಲಿ ರಾಜ್ಯಪಾಲರು ನಿಂತುಕೊಂಡು ಈ ವಿಧಿಯನ್ನು ಹೇಳಿಕೊಡುವುದು, ಏನೂ ಬೇಕಾಗಿಲ್ಲ. ನೀವೇ ಎಲ್ಲಾದರೂ ಬಸ್ ಸ್ಟಾಂಡ್‌ನಲ್ಲೋ, ಮಾರ್ಕೆಟ್‌ನಲ್ಲೋ, ನಿಂತುಕೊಂಡು ಅಲ್ಲೇ ಒಂದು ಪ್ರಮಾಣ ವಚನವನ್ನು ಸ್ವೀಕಾರ ಮಾಡಬಹುದು. ನಮ್ಮವರು ಬಿಹಾರದಲ್ಲಿ ಪ್ರಮಾಣ ವಚನವನ್ನು ಅಸೆಂಬ್ಲಿಯಲ್ಲಿ ಮಾಡಿಸಲಿಲ್ಲವೆಂದು ಆಯಾ ಕ್ಷೇತ್ರಗಳಲ್ಲಿ ಹೋಗಿ, ಶ್ರೀ ನಿತೀಶ್ ಕುಮಾರ್‌ರವರು ಅಲ್ಲೇ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದರು ಅಂತ ಹಾಗೆ ಇಲ್ಲಿ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿಸಿಬಿಡಿ. ರಾಜ್ಯಪಾಲರಿಗೆ ಸಂವಿಧಾನಕ್ಕೆ, ಏಕೆ ಅಪಚಾರ ಮಾಡಿ ಮಂತ್ರಿಗಳಾಗುತ್ತಿರಾ? ಇದನ್ನು ದಯಮಾಡಿ ಈ ಸಭೆಗೆ ತಿಳಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವರಿಗೆ ಯಾರ ಮೇಲಾದರೂ ಪ್ರೀತಿ ವಿಶ್ವಾಸ ಇರಬಹುದು. ಅದಕ್ಕೆ ನಮ್ಮದು ಏನೂ ತಕರಾರು

ಇಲ್ಲ. ಆದರೆ ಇವರು ಕಾಲಿಗೆ ಬೀಳುವಂತಹ ಸಂಸ್ಕೃತಿ ಏನು ಇದೆ, ಇದು ಗುಲಾಮಗಿರಿಯ ಸಂಕೇತ. ಒಬ್ಬ ಜನಪ್ರತಿನಿಧಿ ಇವರು ಯಾರ ಕಾಲಿಗೆ ಬದ್ದರೋ ಅವರು ಇವರನ್ನು ಶಾಸಕರನ್ನಾಗಿ ಮಾಡಲಿಲ್ಲ. ಇವರು ಶಾಸಕರಾಗಿದಿದ್ದರೆ, ಮಂತ್ರಿಗಳಾಗುತ್ತಿರಲಿಲ್ಲ. ಆದರೆ ಲಕ್ಷಾಂತರ ಜನರು ಇವರಿಗೆ ಮತವನ್ನು ಕೊಟ್ಟು ಕಳುಹಿಸಿದರಲ್ಲಾ, ಅವರ ಕಾಲಿಗೆ ಬಿದ್ದರೆ, ಇವರ ಕಾಲಿಗೆ ಬಿದ್ದರೆ, ಏನು ವ್ಯತ್ಯಾಸ ಎನ್ನುವಂಥಾದ್ದು ತಿಳಿಯದು. ಇವರು ಕಾಲಿಗೆ ಬೀಳುವಂಥಾದ್ದು, ನೀವು ಮತವನ್ನು ಹಾಕಿಸಿಕೊಂಡು ಬಂದಂಥ ಮತದಾರರಿಗೆ ಮಾಡಿರುವಂಥ ಅವಮಾನ ಇದು. ಆದುದರಿಂದ ಅವರು ಮತದಾರರಿಗೆ ಅವಮಾನವನ್ನು ಮಾಡಿ, ಯಾರು ಇಲ್ಲಿ ತನ್ನನ್ನು ವಿಧಾನಸೌಧಕ್ಕೆ ಕಳುಹಿಸಿದ್ದಾರೋ, ಅವರಿಗೆ ಅಪಮಾನ ಮಾಡಿರುವಂಥವರು, ಈ ವಿಧಾನಸಭೆಗೆ ಬರಬಹುದಾ ಎನ್ನುವಂಥಾದ್ದು, ನನ್ನ ಪ್ರಶ್ನೆಯಾಗಿದೆ. ಎರಡನೆಯದಾಗಿ ಇವರು ಪ್ರಮಾಣ ವಚನವನ್ನು ಸ್ವೀಕಾರ ಮಾಡುವಂಥ ಸಂದರ್ಭದಲ್ಲಿ ಈ ಸದನದಲ್ಲಿ ನಮ್ಮ ಕೆಲವು ಸದಸ್ಯರು ಪ್ರಮಾಣ ವಚನವನ್ನು ಸ್ವೀಕಾರ ಮಾಡುವಂಥ ಸಂದರ್ಭದಲ್ಲಿ ಅಂದರೆ ನಾವು ಇಲ್ಲಿ ಶಾಸಕರಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡುವಂಥ ಸಂದರ್ಭದಲ್ಲಿ ಇಂತಹ ಒಂದು ಪ್ರಶ್ನೆ ಎದುರಾಗಿತ್ತು. ನಮ್ಮ ಮಾನ್ಯ ವಾಟಾಳ್ ನಾಗರಾಜುರವರು ಹೇಳಿದಂಥ ಪ್ರಶ್ನೆ. ಇಲ್ಲಿ ಯಾರ್ಯಾರೋ ಹೆಸರಿನಲ್ಲಿ ಮಾರಮ್ಮನ ಹೆಸರಿನಲ್ಲಿ, ಗಂಗಮ್ಮನ ಹೆಸರಿನಲ್ಲಿ, ಯಲ್ಲಮ್ಮನ ಹೆಸರಿನಲ್ಲಿ, ಇಲ್ಲಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದಂತಹ ಸಂದರ್ಭದಲ್ಲಿ, ನಾವು ಅದನ್ನು ವಿರೋಧ ಮಾಡಿದೆವು, ಪ್ರತಿಭಟನೆಯನ್ನು ಮಾಡಿದೆವು.

ನೀವು ಯಲ್ಲಮ್ಮ, ಮಾರಮ್ಮ, ಗಂಗಮ್ಮನನ್ನು ಪೂಜೆ ಮಾಡಿ. ಅದಕ್ಕೆ ನಮ್ಮದೇನೂ ತಕರಾರಿಲ್ಲ. ಆದರೆ ನೀವು ಇಲ್ಲಿ ಬಂದು ಅವರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳತಕ್ಕಂಥಾದ್ದನ್ನು, ಬೇರೆಯವರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳತಕ್ಕಂಥಾದ್ದನ್ನು, ಬೇರೆಯವರ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳತಕ್ಕಂಥಾದ್ದನ್ನು ಮಾಡಿದರೆ, ನೀವು ಯಾವುದೇ ಕಾರಣದಿಂದ ಮಂತ್ರಿಯಾಗಿಯಲ್ಲ, ಇಲ್ಲಿ ಸದಸ್ಯರಾಗಿರಲಿಕ್ಕೂ ಕಾನೂನು ಬದ್ಧವಾಗಿ ಸಾಧ್ಯವಿಲ್ಲ. ಯಾರ್ಯಾರ ಹೆಸರಿನಲ್ಲೋ ಪ್ರಮಾಣ ವಚನ ಸ್ವೀಕಾರ ಮಾಡಬಹುದು ಎಂದಾದರೆ, ಸಂವಿಧಾನ ಬದ್ದವಾಗಿ ನಾನು ಪ್ರಮಾಣ ವಚನ ಸ್ವೀಕಾರ ಮಾಡಿ, ಸಂವಿಧಾನವನ್ನು ರಕ್ಷಣೆ ಮಾಡುತ್ತೇನೆ ಎಂದು ನಾವು ಅಸೆಂಬ್ಲಿಗೆ ಸದಸ್ಯರಾಗಿ ನಾಮನಿರ್ದೇಶನ ಮಾಡತಕ್ಕಂಥ ಸಂದರ್ಭದಲ್ಲಿ

ರಿಟರ್ನಿಂಗ್ ಆಫೀಸರ್ ಮುಂದೆ ನಾವು ಸಂವಿಧಾನವನ್ನು ಎತ್ತಿ ಹಿಡಿಯುತ್ತೇವೆ, ಸಂವಿಧಾನಬದ್ಧವಾಗಿ ನಡೆದುಕೊಳ್ಳುತ್ತೇವೆ ಎಂದು ಪ್ರಮಾಣ ವಚನ ಸ್ವೀಕಾರ ಮಾಡುತ್ತೇವೆ. ನಾವು ಆ ರೀತಿ ಪ್ರಮಾಣ ವಚನ ಸ್ವೀಕಾರ ಮಾಡದೇ ಹೋದರೆ ನಮ್ಮ ನಾಮ ನಿರ್ದೇಶನ ಅನರ್ಹತೆಗೆ ಒಳಾಗಾಗುತ್ತದೆ. ನಾವು ಅಲ್ಲಿ ಆ ರೀತಿ ಪ್ರಮಾಣ ವಚನ ಮಾಡಿ, ಇಲ್ಲಿ ಬಂದು ಸಂವಿಧಾನವನ್ನು ಗಾಳಿಗೆ ತೂರಿ, ರಾಜ್ಯಪಾಲರು ಹೇಳಿದುದ್ದನ್ನು ಬಿಟ್ಟು ಯಾರ್ಯಾರ ಹೆಸರಿನಲ್ಲೋ ಪ್ರಮಾಣ ವಚನ ಮಾಡತಕ್ಕಂಥಾದ್ದು ಸಂವಿಧಾನಕ್ಕೆ ಮಾಡಿರತಕ್ಕಂಥ ಅಪಮಾನ ಮತ್ತು ಇವರು ಕಾನೂನುಬದ್ಧವಾಗಿ ಸಚಿವರಾಗಿರಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಇವರು ಮರು ಪ್ರಮಾಣ ವಚನ ಸ್ವೀಕಾರ ಮಾಡಬೇಕು, ಇಲ್ಲವೆಂದರೆ ರಾಜ್ಯಪಾಲರು ಇವರನ್ನು ಮಂತ್ರಿ ಎಂದು ಪರಿಗಣನೆ ಮಾಡಬಾರದು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಇದು ಬಹಳ ಗಂಭೀರವಾದ ವಿಷಯ. ನಾವು ಇದನ್ನು ಸುಲಭವಾಗಿ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು: ಇದು ಗಂಭೀರವಾದ ವಿಚಾರವೇನೋ ಸರಿ. ಆದರೆ ಅವರು ರಾಜ್ಯಪಾಲರ ಎದುರಿಗೇ ಪ್ರಮಾಣ ವಚನ ಮಾಡಿರುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾನು ಅದನ್ನೇ ವಿವರಿಸುತ್ತಿದ್ದೇನೆ. ಇವರು ಓತ್ ತೆಗೆದುಕೊಂಡಿದ್ದನ್ನು ರಾಜ್ಯಪಾಲರು ಯಾವ ರೀತಿಯಲ್ಲಿ ಒಪ್ಪಿಕೊಂಡರು ಅದೇ ತಪ್ಪು ಎಂದು ನಾನು ಹೇಳುತ್ತೇನೆ. ಇವರು ಪುನಃ ಓತೆ ತೆಗೆದುಕೊಳ್ಳುವಂತೆ ರಾಜ್ಯಪಾಲರೇ ಹೇಳಬೇಕಾಗಿತ್ತು. ಕಳೆದ ಬಾರಿಯೂ ಈ ವಿಧಾನಸಭೆಯಲ್ಲಿ ಈ ರೀತಿ ಓತನ್ನು ತೆಗೆದುಕೊಳ್ಳುವಾಗ ನಾವು ಅದಕ್ಕೆ ವಿರೋಧವನ್ನು ಮಾಡಿದುದು ಮಾತ್ರವಲ್ಲ, ಪುನಃ ಓತ್ ತೆಗೆದುಕೊಳ್ಳಲಿಕ್ಕೆ ಹೇಳಿದ್ದೇವೆ. ಕೆಲವು ಸದಸ್ಯರು ಬೇರೆ ರೀತಿಯಲ್ಲಿ ಓತ್ ತೆಗೆದುಕೊಂಡಾಗ, ಅವರನ್ನು ಪುನಃ ಓತ್ ತೆಗೆದುಕೊಳ್ಳಲು ಹೇಳಿದ್ದೇವೆ. ಆದ್ದರಿಂದ, ಯಾವುದು ಸಂವಿಧಾನಬದ್ಧವಾಗಿ ಆಗಿಲ್ಲವೋ, ಸಂವಿಧಾನಬದ್ಧವಾಗಿ ನಡೆದಿಲ್ಲವೋ ಅದು ಸರಿಯಾದುದಲ್ಲ ಎಂದು ನಾವು ಹೇಳುತ್ತೇವೆ.

ಅಧ್ಯಕ್ಷರು: ಅದನ್ನು ಯಾರೂ ಗಣನೆಗೇ ತೆಗೆದುಕೊಳ್ಳುವುದಿಲ್ಲ, ಅದನ್ನು ಯಾರೂ ಸರಿಪಡಿಸುವುದೂ ಇಲ್ಲ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ಲಾ ಮಿನಿಸ್ಟರ್‌ರವರು ಈಗ ಇಲ್ಲೇ ಇದ್ದಾರೆ. ಸಂವಿಧಾನಬದ್ಧವಾಗಿ ಯಾರು ಪ್ರಮಾಣ ವಚನ ಸ್ವೀಕಾರ

ಮಾಡುವುದಿಲ್ಲ, ಅಂಥವರನ್ನು ಡಿಸ್–ಕ್ವಾಲಿಫಿಕೇಷನ್ ಮಾಡುವುದಕ್ಕೆ ಒಂದು ರೆಸುಲೂಷನ್ ಪಾಸು ಮಾಡಬೇಕು. ಬೇರೆ ಹೆಸರುಗಳಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದಾಗ ಗವರ್ನರ್‌ರವರು ಅದನ್ನು ಕೂಡಲೇ ಖಡಂ ಮಾಡಬೇಕು. ಖಿರೆ ಎಂದರೆ ಅವರನ್ನು ತೆಗೆದು ಹಾಕಬೇಕು. ಅಂಥವರನ್ನು ತೆಗೆಯಬೇಕು ಎಂದು ಒಂದು ರೆಸುಲೂಷನ್ ಅನ್ನು ಈ ಅಸೆಂಬ್ಲಿಯಲ್ಲಿ ಪಾಸ್ ಮಾಡಿ ಕಳುಹಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ವ್ಯಕ್ತಮಾಡಿರತಕ್ಕಂಥ ಅಭಿಪ್ರಾಯಗಳು ನಿಜವಾಗಿಯೂ ಕೂಡ ನೂತನವಾಗಿ ಯಾರು ಪ್ರಮಾಣ ವಚನ ಸ್ವೀಕಾರ ಮಾಡುವಂಥ ಸದಸ್ಯರುಗಳಿಗಾಗಲೀ, ಮಂತ್ರಿಗಳಿಗಾಗಲೀ ಒಂದು ಮಾರ್ಗದರ್ಶನ ಮತ್ತು ಬೆಳಕು ಚೆಲ್ಲುವಂಥಾದ್ದು ಎನ್ನುವುದನ್ನು ನಾನು ಒಪ್ಪುತ್ತೇನೆ. ಸಂವಿಧಾನದಲ್ಲಿ ನಿರ್ದಿಷ್ಟವಾಗಿ ಇದೇ ರೀತಿಯಾಗಿ ಪ್ರಮಾಣ ವಚನ ತೆಗೆದುಕೊಳ್ಳಬೇಕು ಎಂದು ಇದೆ. ಆದರೆ, ಇಂಥ ಪ್ರಕರಣಗಳನ್ನು ನಮ್ಮಲ್ಲಿ ಅನೇಕ ಸಂದರ್ಭಗಳಲ್ಲಿ ಕ್ಷಮಾರ್ಹವಾಗಿರತಕ್ಕಂಥ ಪ್ರಕರಣ ಎಂದು ನಮ್ಮಲ್ಲಿ ಬಿಟ್ಟಂಥ ವಿಚಾರಗಳೂ ಕೂಡ ಇವೆ. ತಾವು ಇವತ್ತು ವ್ಯಕ್ತಮಾಡಿರುವ ಅಭಿಪ್ರಾಯವನ್ನು ನಾನು ಮನಸಾರೆ ಒಪ್ಪುತ್ತೇನೆ. ಮಾನ್ಯ ಸಚಿವರು ಹೊಸದಾಗಿ ಪ್ರಮಾಣ ವಚನ ಸ್ವೀಕಾರ ಮಾಡುವಂಥ ಸಂದರ್ಭವಾಗಿದ್ದುದರಿಂದ ಪ್ರಾಯಶಃ ಅವರು ಬಹಳ ಭಾವೋದ್ವೇಗಕ್ಕೆ ಒಳಗಾಗಿ ಆ ಎರಡು ಶಬ್ದಗಳನ್ನು ಹೆಚ್ಚು ಹೇಳಿರತಕ್ಕಂಥಾದ್ದು ಆಗಿರಬಹುದು. ಆದರೆ ಇಂಥ ಪ್ರಕರಣಗಳು ಕೇವಲ ನಮ್ಮಲ್ಲಿ ಮಾತ್ರ ಆಗಿವೆ ಎಂದು ಅಲ್ಲ. ಹಿಂದೆ ಕೂಡ ಇಂಥ ಪ್ರಕರಣಗಳು ನಮ್ಮಲ್ಲಿ ಆಗಿವೆ. ಮತ್ತು ಬೇರೆ ರಾಜ್ಯದಲ್ಲಿ ಆಗಿರತಕ್ಕಂಥಾದ್ದು ಕೂಡ ಇದೆ. ಅಂಥ ಸಂದರ್ಭಗಳಲ್ಲಿ ಮಾನ್ಯ ರಾಜ್ಯಪಾಲರು ಅವರಿಗೆ ಬುದ್ಧಿವಾದವನ್ನು ಹೇಳಿರತಕ್ಕಂಥಾದ್ದು ಆಗಿದೆಯೇ ವಿನಃ ಅವರಿಗೆ ಮರು ಪ್ರಮಾಣ ವಚನ ಸ್ವೀಕಾರ ಮಾಡಿ ಎಂದು ಹೇಳಿದಂಥಾದ್ದು ಇಲ್ಲ. ಎರಡನೆಯದು, ಬಹಳ ಮುಖ್ಯವಾಗಿರತಕ್ಕಂಥಾದ್ದು ಎಂದರೆ, ನಾನು ಕಾನೂನಿನ ಪ್ರಕಾರ ಮಾತನಾಡುತ್ತೇನೆ ಎಂದು ತಾವು ದಯವಿಟ್ಟು ತಿಳಿದುಕೊಳ್ಳಬಾರದು, ಒಮ್ಮೆ ರಾಜ್ಯಪಾಲರು ಪ್ರಮಾಣ ವಚನವನ್ನು ಬೋಧಿಸಿದ ನಂತರ ಅವರು ಎಲ್ಲಾ ದೃಷ್ಟಿಯಿಂದಲೂ ಮಂತ್ರಿಗಳೇ ಆಗಿರುತ್ತಾರೆ. ಆ ಕಾರಣಕ್ಕಾಗಿ, ಆ ತರಹದ ಇನ್‌ಫರ್ಮಿಟಿ ಎಂದು ನಾವೇನು ಕರೆಯುತ್ತೇವೆ, ಅದು ನಿಜವಾಗಿಯೂ ಕೂಡ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ರಾಜ್ಯಪಾಲರು ಏನು ಹೇಳಿದರೋ, ಅದನ್ನು ಇವರು ಹೇಳಲಿಲ್ಲ. ರಾಜ್ಯಪಾಲರು ಹೇಳಿದುದನ್ನು ಬಿಟ್ಟು ಬೇರೆ ಹೇಳಿರುವುದರಿಂದ ಇವರೆಲ್ಲಾ ಮಂತ್ರಿಯಾಗಲು ಸಾಧ್ಯವಿಲ್ಲ. ರಾಜ್ಯಪಾಲರು ಹೇಳಿದುದನ್ನು ಇವರು ಹೇಳಿದ್ದರೆ, ನೀವು ಹೇಳತಕ್ಕಂಥಾದ್ದು ಕರೆಕ್ಟ್.

ಶ್ರೀ ಎಂ.ಪಿ. ಪ್ರಕಾಶ್: ಸಂವಿಧಾನದ ಎರಡನೇ ಶೆಡ್ಯೂಲ್‌ನಲ್ಲಿ ಫ್ರೊಫಾರ್ಮ ಇದೆ. ಆ ಪ್ರೊಫಾರ್ಮದ ಪ್ರಕಾರವೇ ಪ್ರಮಾಣ ವಚನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಇಂಥವುಗಳು ಕ್ಷಮಾರ್ಹವಾದ ಪ್ರಕರಣಗಳು ಎಂದು ನಮ್ಮ ರಾಜ್ಯದಲ್ಲಿಯೇ ರಾಜ್ಯಪಾಲರು ಅನೇಕ ಬಾರಿ, ಅಂಥವರಿಗೆ ಬುದ್ಧಿವಾದವನ್ನು ಹೇಳಿ, ಅದನ್ನು ಮರೆತು ಬಿಟ್ಟಂಥ ಪ್ರಸಂಗವಾಗಿ ಮಾಡಿರತಕ್ಕಂಥಾದ್ದಾಗಿರುವುದರಿಂದ, ಇನ್ನು ಮುಂದೆ ಬರತಕ್ಕಂಥ ಪ್ರಮಾಣ ವಚನ ಸ್ವೀಕಾರ ಮಾಡತಕ್ಕಂಥ ಸದಸ್ಯರುಗಳು ಮತ್ತು ಸಚಿವರುಗಳು, ಸಂವಿಧಾನಬದ್ಧವಾಗಿ ನಿರೂಪಿಸಲ್ಪಟ್ಟಿರತಕ್ಕಂಥಾದ್ದರ ಪ್ರಕಾರವೇ ಪ್ರಮಾಣ ವಚನ ಸ್ವೀಕಾರ ಮಾಡಬೇಕು ಎಂದು ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೂ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ, ತಾವುಗಳು ಈ ವಿಚಾರವನ್ನು ದೊಡ್ಡದು ಮಾಡದೇ, ಮುಂದೆ ಬರುವವರಿಗೆ ಇದೊಂದು ಮಾರ್ಗದರ್ಶನ ಸೂತ್ರ ಎಂದು ಹೇಳಿ ಇದನ್ನು ಇಲ್ಲಿಗೇ ಮುಕ್ತಾಯ ಗೊಳಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ.ವಿ. ಶ್ರೀರಾಮರೆಡ್ಡಿ: ನೀವು ಹಿರಿಯರು. ದಯವಿಟ್ಟು ನನಗೆ ಒಂದೇ ಒಂದು ಕ್ಲಾರಿಫಿಕೇಷನ್ ಕೊಟ್ಟುಬಿಡಿ. ಈ ಸದನ ರಚನೆಯಾದಂಥ ಸಂದರ್ಭದಲ್ಲಿ ಮಾತ್ರ ನಾವು ಇಂಥ ಪದಗಳನ್ನು ಕೇಳಿದ್ದೆವು. ಈ ಹಿಂದೆ ಕೂಡ ನಾನು ವಿಧಾನಸಭೆಯ ಸದಸ್ಯನಾಗಿದ್ದೆ. ಆಗ ನಾನು ಪ್ರಮಾಣ ವಚನ ಸ್ವೀಕಾರ ಮಾಡಿದ್ದೆ. ಆಗ ಈ ಸದನದಲ್ಲಿ ಯಾರೂ ಈ ರೀತಿ ಯಾರ್ಯಾರೋ ಹೆಸರಿನಲ್ಲಿ, ವ್ಯಕ್ತಿಗಳ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಲಿಲ್ಲ. ನಾನು 30 ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿದ್ದೇನೆ. 30–35 ವರ್ಷಗಳಿಂದ ಪ್ರತಿದಿನವೂ ಪತ್ರಿಕೆಗಳನ್ನು ಓದುತ್ತಿದ್ದೇನೆ. ಹಿಂದೆ ಇಂಥ ಘಟನೆಗಳು ನಡೆದಂಥಾದ್ದನ್ನು ನಾವು ಎಲ್ಲೂ ಕಾಣಲಿಲ್ಲ. ಹಾಗಾಗಿ, ನೀವು ಇದನ್ನು ಸಮರ್ಥನೆ ಮಾಡಿಕೊಳ್ಳಲಿಕ್ಕಾಗಿ, ಹಿಂದೆ ಯಾರೋ ಈ ರೀತಿ ಮಾಡಿದ್ದರು ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ಎರಡನೆಯದಾಗಿ, ರಾಜ್ಯಪಾಲರು ಅಂಥವರಿಗೆ ಬುದ್ಧಿವಾದ ಹೇಳಿದರು ಎಂದು ಹೇಳಿದಿರಿ. ಪಾಪ, ರಾಜ್ಯಪಾಲರಿಗೆ ಅವರು ಏನು ಹೇಳಿದರು ಎನ್ನುವುದೇ ಗೊತ್ತಿಲ್ಲದಿರುವಾಗ ಹೇಗೆ ಬುದ್ಧಿವಾದ

ಹೇಳಲಿಕ್ಕಾಗುತ್ತದೆ? ಆದ್ದರಿಂದ, ದಯವಿಟ್ಟು ಈ ರೀತಿ ಸಮರ್ಥನೆ ಮಾಡ
ಒಂದು ವಿಚಾರವನ್ನು ನೀವು ಹೇಳಿದಿರಿ, ಇದು ಕ್ಷಮಾರ್ಹವಾದುದು
ಹೇಳಿದಿರಿ. ಅದನ್ನು ಬೇಕಾದರೆ ಪರಿಗಣನೆ ಮಾಡಬಹುದೇ ಹೊರತು, ಆ
ಸಮರ್ಥನೆ ಮಾಡಲಿಕ್ಕೆ ಹೋಗಬೇಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಪ್ರಮಾಣ ವಚನ ಸ್ವೀ
ಮಾಡತಕ್ಕಂಥ ಪ್ರತಿ ಸದಸ್ಯರೂ ಕೂಡ ಅದಕ್ಕೆ ಬದ್ಧರಾಗಿರಬೇಕು. ಆ
ಸಮರ್ಥನೆ ಮಾಡಿಕೊಳ್ಳಲಿಕ್ಕೆ ಸರ್ಕಾರದವರಾದ ನಾವು ತಯಾರಿಲ್ಲ.
ಹಿಂದೆ ಇಂಥ ವಿಷಯಗಳು ನಡೆದುದು ರಾಜ್ಯಪಾಲರಿಗೆ ಗೊತ್ತಿಲ್ಲ ಎಂದ
ಅಲ್ಲ. ಇದೇ ರಾಜ್ಯಪಾಲರು ಬಂದಂಥ ಸಂದರ್ಭದಲ್ಲಿ ನಮೂನೆಯ ಹೊ
ಉಪಯೋಗಿಸಿದಂಥ ವಿಚಾರಗಳಿಗೆ ಬುದ್ಧಿವಾದ ಹೇಳಿ, ಮಾರ್ಗದ
ಮಾಡಿದಂಥ ಉದಾಹರಣೆಗಳಿವೆ. ಅದನ್ನು ಇಲ್ಲಿ ಮತ್ತೆ ಪ್ರಸ್ತಾಪಿಸಬೇಕಾದ
ತಮಗೇ ಗೊತ್ತಿದೆ. ಆದ್ದರಿಂದ, ಇದನ್ನು ಕ್ಷಮಾರ್ಹವಾದುದು ಆ
ತಿದ್ದಿಕೊಳ್ಳುವಂಥ ವಿಚಾರ ಎಂದು ಭಾವಿಸಿ ತಾವು ದಯವಿಟ್ಟು ಇದನ್ನು
ಎಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ನಾವು ಅವರನ್ನೇನೂ ಹಿಡಿದುಕೊ
ಬಿಟ್ಟು ಬಿಡುತ್ತೇವೆ, ಆ ವಿಚಾರ ಬೇರೆ. ನಾನು ತಮಗೆ ಹೇಳುವುದೇನೆ
ಶಾಸನಸಭೆಗೆ ನಾವು ನಾಮಿನೇಷನ್ ಸಲ್ಲಿಸುವಾಗ ಪ್ರಮಾಣ
ತೆಗೆದುಕೊಳ್ಳಬೇಕು ಎಂದು ಹೇಳುತ್ತಾರೆ. ಅಲ್ಲಿ ನಾವು ಯಾವ
ಬೇಕಾದರೂ ಹೇಳಬಹುದೇ?

ಅಧ್ಯಕ್ಷರು: ಸಾಕು, ಈಗ ಇದನ್ನು ಮುಕ್ತಾಯ ಮಾಡೆ
ಸಂಬಂಧಪಟ್ಟವರು ಇದಕ್ಕೆ ಏನು ಹೇಳುತ್ತಾರೆಂದು ಕೇಳೋಣ.

ಶ್ರೀ ವಾಟಾಳ್ ನಾಗರಾಜ್: ಅವರು ಕನ್ನಡದಲ್ಲಿ ಪ್ರಮಾಣ
ತೆಗೆದುಕೊಳ್ಳಲಿಲ್ಲ. ಅದಕ್ಕೆ ಏನು ಹೇಳುತ್ತೀರಿ? ನೀವು ಎಲ್ಲಕ್ಕೂ ಸಮ
ಮಾಡುತ್ತಿದ್ದೀರಿ. ಅದಕ್ಕೇನು ಹೇಳುತ್ತೀರಿ ಎಂದು ಹೇಳಿ. ಏಕೆ ಅವರು ಕನ್ನ
ಪ್ರಮಾಣ ವಚನ ತೆಗೆದುಕೊಳ್ಳಲಿಲ್ಲ? ಅವರು ಯಾವ ರಾಜ್ಯದ ಸಚಿ
ಯಾವ ರಾಜ್ಯಕ್ಕೆ ಅವರು ಸಚಿವರಾಗಿದ್ದಾರೆ? ಅವರಿಗೆ ಕನ್ನಡ ಬರುವುದೀ
ಅವರಿಗೆ ಕನ್ನಡ ಬರುತ್ತದೋ, ಇಲ್ಲವೋ ಎಂದು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಈಗ ಒಂದು ತೀರ್ಮಾನವಾಗಿ
ಇವತ್ತಿನಿಂದ ಅವರು ಆಕಸ್ಮಾತ್ತಾಗಿ ಕೂಡ ಈ ಮನೆಯಲ್ಲಿ
ಮಾತನಾಡಕೂಡದು. ಈ ರಾಜ್ಯದಲ್ಲಿ ಒಂದೊಂದು ಜಾತಿಗೊಂದು

ಇದೆಯೇ ಅಥವಾ ರಾಜ್ಯಕ್ಕೊಂದು ಭಾಷೆ ಇದೆಯೇ? ಏನಿದು ಹುಡುಗಾಟ? ಈ ರೀತಿಯಾದರೆ, ನಾಳೆ ಇನ್ನೊಬ್ಬರು ತೆಲುಗಿನಲ್ಲಿ ತೆಗೆದುಕೊಳ್ಳುತ್ತಾರೆ, ತಮಿಳಿನಲ್ಲಿ ತೆಗೆದುಕೊಳ್ಳುತ್ತಾರೆ, ಮರಾಠಿಯಲ್ಲಿ ತೆಗೆದುಕೊಳ್ಳುತ್ತಾರೆ. ಅದನ್ನು ಈ ರಾಜ್ಯದ ಜನ ಕುಳಿತುಕೊಂಡು ನೋಡಬೇಕೇ?

ಶ್ರೀ ವಾಟಾಳ್ ನಾಗರಾಜ್: ನಾನು ಇದನ್ನು ತೀವ್ರವಾಗಿ ವಿರೋಧ ಮಾಡುತ್ತೇನೆ. ಇದು ಸರಿಯಾದುದಲ್ಲ. ಅವರಿಗೆ ಕನ್ನಡ ಬರುವುದಿಲ್ಲವೇ ಎನ್ನುವುದನ್ನು ಹೇಳಿ. ಅವರಿಗೆ ನಾನು ಕಪ್ಪುಬಟ್ಟೆಯನ್ನು ಪ್ರದರ್ಶನ ಮಾಡುತ್ತೇನೆ. ಅವರಿಗೆ ಕನ್ನಡ ಬರುತ್ತದೋ, ಬರುವುದಿಲ್ಲವೋ ಎನ್ನುವುದನ್ನು ಕೇಳಿನೋಡಿ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ಅವರು ಹೇಳಲಿ. ಅವರು ಹೇಳುವುದನ್ನು ಕೇಳಿ.

ಶ್ರೀ ಜಮೀರ್ ಅಹಮದ್ ಖಾನ್ (ವಕ್ಫ್ ಸಚಿವರು) : ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಇಂಗ್ಲೀಷಿನಲ್ಲಿ ಸ್ವೇರಿಂಗ್ ಮಾಡಿದೆ ಎಂದು ನನ್ನ ಮೇಲೆ ಒಂದು ಆರೋಪವನ್ನು ಮಾಡಿದ್ದಾರೆ. ಒಬ್ಬ ಕನ್ನಡಿಗನಾಗಿ ಈ ಬಗ್ಗೆ ನಿಜವಾಗಿ ನನಗೂ ನೋವಾಗಿದೆ. ರಾತ್ರಿಯೆಲ್ಲಾ ನಾನು ನಿದ್ದೆ ಮಾಡಲಿಲ್ಲ. ಒಬ್ಬ ಕನ್ನಡಿಗನಾಗಿ, ನನಗೆ ಕನ್ನಡ ಓದುವುದಕ್ಕೆ ಬಂದು ಕನ್ನಡದಲ್ಲಿ ಪ್ರಮಾಣ ವಚನ ತೆಗೆದುಕೊಳ್ಳದೇ, ಇಂಗ್ಲೀಷಿನಲ್ಲಿ ತೆಗೆದುಕೊಂಡಿದ್ದರೆ ನನ್ನದು ತಪ್ಪಾಗುತ್ತಿತ್ತು. ಆದರೆ ನನ್ನ ದುರಾದೃಷ್ಟವೆಂದರೆ, ನನ್ನ ತಂದೆತಾಯಿಗಳು ನಾನು ಡಾಕ್ಟರ್ ಆಗಲಿ, ಇಂಜಿನಿಯರ್ ಆಗಲಿ ಎಂದು ಹೇಳಿ ನನ್ನನ್ನು ಕಾನ್ವೆಂಟ್ ಸ್ಕೂಲಿಗೆ ಕಳುಹಿಸಿದರು. ಹಾಗಾಗಿ ನನಗೆ ಇಂಗ್ಲೀಷ್ ಬಿಟ್ಟು ಬೇರೆ ಭಾಷೆ ಬರುವುದಿಲ್ಲ.

As a Muslim,

ಇವತ್ತು ನನಗೆ ಉರ್ದು ಓದುವುದಕ್ಕೆ, ಬರೆಯುವುದಕ್ಕೆ ಬರುವುದಿಲ್ಲ. ಇವರಿಗೆ ಎಷ್ಟು ನೋವಾಗಿದೆಯೋ, ಅದರ ಎರಡರಷ್ಟು ನೋವು ನನಗಾಗಿದೆ. ನನಗೆ ಕನ್ನಡ ಗೊತ್ತಿದ್ದೂ, ನಾನು ಇಂಗ್ಲೀಷಿನಲ್ಲಿ ಪ್ರಮಾಣ ವಚನ ತೆಗೆದುಕೊಂಡಿದ್ದರೆ, ಅದು ದೊಡ್ಡ ತಪ್ಪು. ಹಾಗಾಗಿದ್ದರೆ ನಾನು ಈಗಲೇ ನನ್ನ ಎಂಎಲ್‌ಎ ಹುದ್ದೆಗೂ ರಾಜೀನಾಮೆ ಕೊಡಬೇಕು, ಮಂತ್ರಿ ಪದವಿಗೂ ರಾಜೀನಾಮೆ ಕೊಡಬೇಕು ; ಈ ಕ್ಷಣವೇ ನಾನು ಕರ್ನಾಟಕ ದೇಶವನ್ನೇ ಬಿಟ್ಟು ಹೋಗಬೇಕು. ಮಾನ್ಯ ವಾಟಾಳ್ ನಾಗರಾಜ್ ಸಾಹೇಬರೇ, ಆ ರೀತಿ ನಾನು ಬೇಕು ಎಂದೇನೂ ಮಾಡಿಲ್ಲ. ತಾವು ಇನ್ನೊಂದು ವಿಷಯವನ್ನು ಹೇಳಿದಿರಿ, ಕುಮಾರಸ್ವಾಮಿಯ ಹೆಸರು ಮತ್ತು ನನ್ನ ತಾಯಿಯ ಹೆಸರನ್ನು ತೆಗೆದುಕೊಂಡೆ

ಎಂದು ಹೇಳಿದಿರಿ. In blessing of ಎಂದು ನಾನು ತೆಗೆದುಕೊಂಡೆ. ಅದು ತಪ್ಪಾಗಿದ್ದರೆ ಅದಕ್ಕೆ ನಾನು ಕ್ಷಮೆ ಕೇಳುತ್ತೇನೆ.

(ಗೊಂದಲ)

ಶ್ರೀ ಜಮೀರ್ ಅಹಮದ್ ಖಾನ್: ಮಾನ್ಯ ವಾಟಾಳ್ ನಾಗರಾಜ್ ರವರೇ, ನಾನು ಏನು ಹೇಳಿದೆ ಎಂದರೆ, 'In the name of Alish and blessing or my mother and H.D.Kumaraswamy and Hon'ble Chief Minister' ನಾನು ಕುಮಾರಸ್ವಾಮಿಯವರನ್ನು ಮತ್ತು ನನ್ನ ತಾಯಿಯನ್ನು ದೇವರಿಗೆ ಕಂಪೇರ್ ಮಾಡಿಲ್ಲ. 'In blessing of .....' ಎಂದು ನಾನು ಹೇಳಿದ್ದು. ಅದರಲ್ಲಿ ನನ್ನದೇನಾದರೂ ತಪ್ಪಿದ್ದರೆ, ನಾನು ಗೊತ್ತಾಗದೇ ತಪ್ಪು ಮಾಡಿದ್ದೇನೆ, ಅದಕ್ಕೂ ನಾನು ತಮಗೆಲ್ಲಾ ಕೈಜೋಡಿಸಿ ಕ್ಷಮೆ ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಮಗೆ ಅವರ ಮೇಲೇನೂ ವೈಯಕ್ತಿಕವಾಗಿ ದ್ವೇಷವಿಲ್ಲ. ಕನ್ನಡ ಮಾತನಾಡಲು ಬರದೇ ಇರತಕ್ಕಂಥವರು ಮಂತ್ರಿಗಳಾಗುವುದು ಸರಿಯಲ್ಲ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಕಪ್ಪು ಬಾವುಟ ಪ್ರದರ್ಶಿಸುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಎನ್. ಚಿಲುವರಾಯಸ್ವಾಮಿ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಇನ್ನು ಮುಂದೆ ಯಾರೂ ಆ ರೀತಿ ಕನ್ನಡ ಬಿಟ್ಟು ಮಾತನಾಡುವುದು ಸೂಕ್ತವಲ್ಲ. ಎನ್ನುವುದರ ಬಗ್ಗೆ ಅಂತಿಮವಾಗಿ ಒಂದು ತೀರ್ಮಾನವನ್ನು ತೆಗೆದುಕೊಂಡು, ಅವರಿಗೆ ಕನ್ನಡ ಬರಲಿ, ಬಾರದಿರಲಿ, ಆ ಪದ್ಧತಿಯನ್ನು ಅನುಸರಿಸುವುದು ಬೇಡ. ಇನ್ನು ಮುಂದೆ ಕನ್ನಡ ಕಲಿತುಕೊಂಡು ಅವರು ಪ್ರಮಾಣವಚನ ಸ್ವೀಕಾರ ಮಾಡಲಿ. ಇನ್ನು ಮುಂದೆ ಯಾವುದೇ ಕಾರಣಕ್ಕೂ ಅದನ್ನು ಸದನದಲ್ಲಿಯಾಗಲೀ ಅಥವಾ ಮಂತ್ರಿಯಾಗಿ ಸದನದಲ್ಲಿ ಮಾತನಾಡ ತಕ್ಕಂಥದ್ದಾಗಲಿ ಅದನ್ನು ಮುಂದುವರಿಸುವುದು ಬೇಡ. ದಯವಿಟ್ಟು ಇದನ್ನು ಇಲ್ಲಿಗೆ ಕೈಬಿಟ್ಟು ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್. ಆಂಜನೇಯ: ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಿ ಸ್ವಾಮಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮುಂದಿನ ವಿಷಯಗಳನ್ನು ಅಜೆಂಡಾ ಪ್ರಕಾರ ತೆಗೆದುಕೊಳ್ಳಬೇಕು. ಬಿಲ್ ಇದೆ, ಗಮನ ಸೆಳೆಯುವ ಸೂಚನೆಗಳು ಇವೆ, ಅನಂತರ ರೆಡ್ಡಿಯವರು ಪ್ರಸ್ತಾಪ ಮಾಡಿದ ವಿಷಯದ ಮೇಲೆ ಚರ್ಚೆ